ಶ್ರೀ ವಿ. ಎ. ಪಾಯಿ.—ಮುಂದೆ ಡಿಫ್ಲೋ ಮಾಡುವ ಬಗ್ಗೆ ವಿಚಾರ ಮಾಡುತ್ತಾರೆಯೆ ?

ಶ್ರೀ ಕೆ. ಎಚ್. ರಂಗನಾಥ್.— ವಿಚಾರ ಮಾಡೋಣ.

PURCHASE OF SUGAR CANE BY THE SUGAR FACTORIES

234. Shri P. P. HEGRE (Chikodi)—

Will the Minister for Industries and Parliamentary Affairs be pleased to state :—

(a) whether a specific area is earmarked for a sugar factory, for purchasing sugar cane grown in that area in respect of various sugar factories in the State ;

(b) whether all the sugar cane growers in the specified area are bound by any rules to be the members of the sugar factory in that area ;

(c) if not, whether it is compulsory for all the sugar cane growers in the area to supply their sugar cane to the factory ;

(d) if so, whether the sugar factory, in the area is also bound by rules to purchase all the sugar cane grown in the area ?

Sri S. M. KRISHNA (Minister for Industries and Parliamentary Affairs).—

(a) A specific area is earmarked whenever the factory requests for such demarcation.

(b) No.

(c) In the event of reservation orders being issued under the Sugar Cane (Control) Order, 1966, 95 per cent of the sugar cane grown has to be supplied by the growers to the factory and **Pari** Passu.

(d) The factory is bound to purchase the cane supplied.

ಶ್ರೀ ಪಿ. ಪಿ. ಹೆಗಡೆ.—ಪ್ರಶ್ನೆಯ (ಅ) ಮತ್ತು (ಇ) ಭಾಗಕ್ಕೆ ಕೊಟ್ಟಿರುವ ಉತ್ತರಗಳನ್ನು ನೋಡಿದರೆ ಕಬ್ಬು ಬೆಳೆಯುವ ರೈತ ತನಗೆ, ಫಾಯಿದೆಯಾಗುವ ರೀತಿಯಲ್ಲಿ ಉಪಯೋಗಮಾಡಿ ಕೊಳ್ಳಬೇಕು ಎನ್ನುವ ಸ್ವಾತಂತ್ರ್ಯವನ್ನು ಕಸಿದು ಕೊಂಡಂತಾಗುವುದಿಲ್ಲವೇ ?

† ಶ್ರೀ ಎಸ್. ಎಂ. ಕೃಷ್ಣ.— ನಕ್ಕರೆ ಕಾರ್ಖಾನೆ ಯಾವ ಪ್ರದೇಶದಲ್ಲಿದೆ ಆ ಪ್ರದೇಶದಲ್ಲಿ ಅದರ ಸುತ್ತಮುತ್ತಲ ಭಾಗದಲ್ಲಿ ಬೆಳೆಯತಕ್ಕ ಕಬ್ಬು ಕಾರ್ಖಾನೆಗೆ ಹೊರಕಡೆ ಹೋದರೆ ಕಾರ್ಖಾನೆಯನ್ನು ಮುಚ್ಚಬೇಕಾದ ಪರಿಸ್ಥಿತಿ ಬರುವುದರಿಂದ ಕಬ್ಬು ಬೆಳೆಯತಕ್ಕ ರೈತರ ಮೇಲೆ ಕೊಂಚಮಟ್ಟಿನ ನಿಯಂತ್ರಣ ಅಗತ್ಯ ಎನ್ನುವುದು ಸರ್ಕಾರದ ಅಭಿಪ್ರಾಯ.

ಶ್ರೀ ಪಿ. ಪಿ. ಹೆಗಡೆ.—ಹಾಗೆ ನಿಯಂತ್ರಣವಿದ್ದಾಗ, ಕಬ್ಬು ಬೆಳೆಗಾರರಿಗೆ ಯೋಗ್ಯವಾದ ಬೆಲೆ ದೊರೆಯಬೇಕು ಎನ್ನುವ ನೀತಿ ಇರಬೇಕು. ಬೇರೆ ಬೇರೆ ಕಾರ್ಖಾನೆಯವರು ಬೇರೆ ಬೇರೆ ದರವನ್ನು ಕೊಡುವುದರಿಂದ ಹೆಚ್ಚಿನ ದರ ಎಲ್ಲಿ ಸಿಕ್ಕುತ್ತದೆಯೋ ಅಲ್ಲಿ ವ್ಯಾಪಾರ ಮಾಡಬಹುದು, ಆ ಪ್ರದೇಶಕ್ಕೆ ಸಂಬಂಧಪಟ್ಟ ಕಾರ್ಖಾನೆ ದರ ಕಡಮೆ ಕೊಟ್ಟರೆ ರೈತನಿಗೆ ಲುಕ್ಸಾನಾಗುತ್ತದೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಪ್ರತಿವರ್ಷ ಕೇಂದ್ರ ಸರ್ಕಾರದವರು ಕಬ್ಬಿಗೆ ಕನಿಷ್ಠ ದರವನ್ನು ನಿಗದಿ ಮಾಡುತ್ತಾರೆ. ಅದಾದನಂತರ ಪ್ರತಿಯೊಂದು ಸಕ್ಕರೆ ಕಾರ್ಖಾನೆಯಲ್ಲಿಯೂ ಆ ಕಬ್ಬಿನ ಇಳುವರಿ ಪ್ರಮಾಣದ ಆಧಾರದ ಮೇಲೆ ಬೆಲೆಯನ್ನು ಹೆಚ್ಚು ಕೊಡುತ್ತಾರೆ. ಸರ್ಕಾರದ ಉದ್ದೇಶ ವಾದರೂ ಕೂಡ ರೈತನಿಗೆ ನ್ಯಾಯಬೆಲೆ ಸಿಕ್ಕಬೇಕು ಎನ್ನುವುದೇ ಆಗಿದೆ. ಈ ಬೆಲೆಗಳ ಬಗ್ಗೆ ಇತ್ತೀಚೆಗೆ ಸರ್ಕಾರದವರು ಒಂದು ಹೈಪವರ್ ಕಮಿಟಿಯನ್ನು ಮಹಾರಾಷ್ಟ್ರದ ಮಾದರಿಯಲ್ಲಿ ಮಾಡಿದ್ದಾರೆ. ಆ ಕಮಿಟಿಯಲ್ಲಿ ಮುಖ್ಯ ಮಂತ್ರಿಗಳು, ವ್ಯವಸಾಯ ಮಂತ್ರಿಗಳು, ಸಹಕಾರ ಮಂತ್ರಿಗಳು ಮತ್ತು ಕೈಗಾರಿಕಾ ಮಂತ್ರಿಗಳು ಇದ್ದು ಯಾವ ಯಾವ ಕಾರ್ಖಾನೆ ಏನೇನು ದರ ವನ್ನು ಕೊಡಬಹುದು ಎನ್ನುವುದನ್ನು ತೀರ್ಮಾನ ಮಾಡುತ್ತಾರೆ.

ಶ್ರೀ ಪಿ. ಪಿ. ಹೆಗರೆ.—ಕಾರ್ಖಾನೆಯ ಇಂಟರೆಸ್ಟ್ ನಲುವಾಗಿ ಮತ್ತು ರೈತರಿಗೆ ಲುಕ್ಸಾನು ಬಾರದಂತೆ ನೋಡಿಕೊಳ್ಳುವುದಕ್ಕೆ, ಕಾರ್ಖಾನೆ ನುಲಲಿತವಾಗಿ ನಡೆಯುವಂತೆ ನೋಡಿಕೊಳ್ಳುವು ದಕ್ಕೆ ಕಾರ್ಖಾನೆಯನ್ನು ನಿರ್ಮಿಸುವಂಥ ಜನರು ಸರಿಯಾದ ಕ್ಷೇತ್ರವನ್ನು ಆಳವಡಿಸಿಕೊಂಡು ಆ ಕ್ಷೇತ್ರದಲ್ಲಿ ಕಾರ್ಖಾನೆಗೆ ಬೇಕಾದ ಕಬ್ಬನ್ನು ಬೆಳೆಯುವ ಪ್ರದೇಶವನ್ನು ಖಾತ್ರಿ ಮಾಡಿಕೊಂಡ ನಂತರ ಅವರು ಸರ್ಕಾರವನ್ನು ಕೇಳಿಕೊಂಡು ಅವರಿಗೆ ರಿಯಾಕ್ಷನ್ ಕೊಡುವುದು ಉಚಿತವಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.—ಅದೇ ಪದ್ಧತಿಯನ್ನೇ ಈಗ ಅನುಸರಿಸುತ್ತಿದ್ದೇವೆ.

1-30 P.M.

ಶ್ರೀ ಪಿ. ಪಿ ಹೆಗರೆ.—ಸಕ್ಕರೆ ಕಾರ್ಖಾನೆಯವರು ರೈತರು ಕೊಡುವ ಬೆಲೆ ಇಂತಿಷ್ಟು ಇರ ಬೇಕೆಂದು ನಿಗದಿ ಮಾಡದೇ ಇರುವುದರಿಂದ ರೈತರಿಗೆ ಕಷ್ಟಗಳಾಗುತ್ತಿವೆ ಮತ್ತು ರೈತರು ಕಬ್ಬನ್ನು ಕಾರ್ಖಾನೆಗೆ ತುಂಬಿದ ಮೇಲೆ ಅವರಿಗೆ ಕೂಡಲೇ ಹಣ ಕೊಡುವ ವ್ಯವಸ್ಥೆ ಇಲ್ಲ. ಇಂತಿಷ್ಟೇ ಅವಧಿ ಯಲ್ಲಿ ರೈತರಿಗೆ ಹಣ ಕೊಡಬೇಕೆಂದು ಎಲ್ಲ ಕಾರ್ಖಾನೆಗಳಿಗೂ ಸೂಚನೆಗಳನ್ನು ಕಳುಹಿಸಲಾಗು ತ್ತದೆಯೇ ?

ಶ್ರೀ ಎಸ್. ಎಂ ಕೃಷ್ಣ.—ರೈತರು ಕಬ್ಬನ್ನು ಫ್ಯಾಕ್ಟರಿಗೆ ಕೊಟ್ಟ ಕೂಡಲೇ ರೈತರಿಗೆ ಹಣ ವನ್ನು ಪಾವತಿ ಮಾಡಬೇಕಾಗುತ್ತದೆ. ಆದರೆ ಇದರಲ್ಲಿ ರೈತರಿಗೂ ಕಾರ್ಖಾನೆಗೂ ಅಗ್ರಿಮೆಂಟು ಮಾಡುವಾಗ ಅದರಲ್ಲಿ ಕಬ್ಬು ಸರಬರಾಜು ಮಾಡಿ ಎರಡು ವರ್ಷಗಳ ಮೇಲೆ ಹಣ ತೆಗೆದುಕೊಳ್ಳು ತ್ತೇವೆಂದು ಬರೆದುಕೊಟ್ಟಿರುತ್ತಾರೆ. ಇದರ ಬಗ್ಗೆ ಸರಕಾರ ಏನೂ ಮಾಡಲು ಸಾಧ್ಯವಿಲ್ಲ. ಇದು ಆಯಾ ಕಾರ್ಖಾನೆಗಳು ಅನುಸರಿಸುತ್ತಿರುವ ಪದ್ಧತಿ.

ಶ್ರೀ ಪಿ. ಎಂ. ಗಾಡಿ.—ಕೆಲವು ಕಡೆ ಕಬ್ಬನ್ನು ಕಟಾವು ಮಾಡಲು ಕಾರ್ಖಾನೆಯವರು ಪರ್ಮಿಟ್ಟನ್ನು ಕೊಡದೇ ಇರುವುದರಿಂದ ರೈತರಿಗೆ 12-13 ತಿಂಗಳವರೆಗೆ ಕಬ್ಬನ್ನು ಇಟ್ಟು ಕಾಯ ಬೇಕಾಗಿದೆ ಮತ್ತು ಇದರಿಂದ ರೈತರಿಗೆ ಲುಕ್ಸಾನು ಕೂಡ ಆಗುತ್ತದೆ. ಇಂತಹ ರೈತರಿಗೆ ಬೆಲ್ಲ ಮಾಡಲು ಅವಕಾಶ ಕೊಟ್ಟರೆ ಅವರಿಗೆ ಅನುಕೂಲವಾದರೂ ಆಗುತ್ತದೆ. ಇದಕ್ಕೆ ಸರಕಾರ ಸೂಕ್ತ ವಾದ ಸೂಚನೆಗಳನ್ನು ಕೊಡುತ್ತಾರೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಕಾರ್ಖಾನೆಗಾಗಿ ಬೆಳೆದಿರುವ ಕಬ್ಬನ್ನು ಕಟಾವು ಮಾಡಲು ಪರ್ಮಿಷನ್‌ನನ್ನು ಕೊಡುತ್ತಿಲ್ಲ ಎಂದು ಸರಕಾರಕ್ಕೆ ಆಗಿಂದಾಗ್ಗೆ ದೂರುಗಳೇನೋ ಬರುತ್ತಿವೆ ಇಂತಹ ದೂರುಗಳು ಬಂದಾಗ ಆಯಾ ಕಾರ್ಖಾನೆಯ ಮ್ಯಾನೇಜುಮೆಂಟಿನ ಜೊತೆಯಲ್ಲಿ ಸರಕಾರ ವ್ಯವಹಾರ ಮಾಡಿ ಸೂಕ್ತವಾದ ಪರಿಹಾರವನ್ನು ಕೈಗೊಳ್ಳುತ್ತಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ.—ಮಾನ್ಯ ಮಂತ್ರಿಗಳು ಸಕ್ಕರೆ ಕಾರ್ಖಾನೆಗೂ ರೈತರಿಗೂ ಅಗ್ರಿಮೆಂಟಾಗಿ ಅದರ ಪ್ರಕಾರ ಬೆಲೆ ಕೊಡಿಸುತ್ತಾರೆಂದು ತಿಳಿಸಿದರು. ಕಾರ್ಖಾನೆ ಯವರಿಗೆ ಶೇಕಡಾ 95 ಭಾಗದಷ್ಟು ಕಬ್ಬನ್ನೂ ಪೂರ್ತಿಯಾಗಿ ರೈತರು ಕೊಡುತ್ತಿರುವುದರಿಂದ ಆ ಪರಿಸ್ಥಿತಿಯಿರುವಾಗ ರೈತರಿಗೆ ಇಂತಿಷ್ಟು ಬೆಲೆ ಕೊಡಬೇಕೆಂದು ಸರಕಾರದವರೇ ಏಕೆ ಎಲ್ಲ ಕಾರ್ಖಾನೆ ಗಳಿಗೂ ಸೂಚನೆ ಕೊಡಬಾರದು ? ಕೇಂದ್ರ ಸರಕಾರ ಗರಿಷ್ಠ ಹಾಗೂ ಕನಿಷ್ಠ ಬೆಲೆ ನಿಗದಿ ಮಾಡುವಂತೆ ಈ ಸರಕಾರ ಏಕೆ ಗರಿಷ್ಠ ಬೆಲೆ ನಿಗದಿ ಮಾಡಬಾರದು ?

ಶ್ರೀ ಎಸ್. ಎಂ. ಕೃಷ್ಣ.—ಕೇಂದ್ರ ಸರಕಾರದವರು ಕನಿಷ್ಠ ಬೆಲೆ ಮಾತ್ರ ನಿಗದಿ ಮಾಡು ತ್ತಾರೆ. ಗರಿಷ್ಠ ಬೆಲೆ ನಿಗದಿ ಮಾಡುವುದು ಆಯಾ ಕಾರ್ಖಾನೆಗಳಿಗೆ ಬಿಟ್ಟಿದ್ದಾರೆ. ಅವರೇ ಇದನ್ನು ನೋಡಿಕೊಂಡು ನಿಯಂತ್ರಣ ಮಾಡುತ್ತಾರೆ. ಇದರಲ್ಲಿ ಕೆಲವು ಕಡೆ ಇರುವ ಕಬ್ಬಿನಲ್ಲಿರುವ

(ಶ್ರೀ ಎಸ್. ಎಂ. ಕೃಷ್ಣ)

ಷುಗರ್ ಕಂಟೆಂಟು ಶೇಕಡಾ 12 ರಷ್ಟು ಇರುತ್ತೆ. ಇನ್ನು ಕೆಲವು ಕಡೆ ಷುಗರ್ ಕಂಟೆಂಟು ಶೇಕಡಾ 12.8 ರಷ್ಟು ಇರುತ್ತೆ. ಇದರ ಆಧಾರದ ಮೇಲೆ ಕಾರ್ಖಾನೆಯವರೇ ಬೆಲೆ ನಿಗದಿ ಮಾಡಿ ರೈತರಿಗೆ ಕೊಡುತ್ತಾರೆ. ಕೆಲವು ಕಡೆ ಶೇಕಡಾ 9 ಇಲ್ಲವೇ ಹತ್ತರಷ್ಟು ಷುಗರ್ ಕಂಟೆಂಟು ಇರುವುದರಿಂದ ಅಲ್ಲಿ ಬೆಲೆ ಕಡಿಮೆ ಕೊಡುತ್ತಾರೆ. ಇದನ್ನು ಸರಕಾರ ತಪ್ಪಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಬಿ. ಬಂಗಿ.—ಕನಿಷ್ಟ ಬೆಲೆ 90 ರೂಪಾಯಿ ಇರಬೇಕೆಂದು ನಿಗದಿ ಮಾಡಿರುವುದರಿಂದ ಎಲ್ಲ ಕಬ್ಬನ್ನೂ ರೈತರು ಆಯಾ ಕಾರ್ಖಾನೆಗೇ ಕೊಡುತ್ತಿರುವುದರಿಂದ ಇದರ ಗರಿಷ್ಟ ಬೆಲೆಯನ್ನೂ ಯಾವ ಯಾವ ಕಡೆ ಎಷ್ಟೆಷ್ಟು ಇರಬೇಕೆಂದು ನಿಗದಿ ಮಾಡಬಾರದು ?

ಶ್ರೀ ಎಸ್. ಎಂ. ಕೃಷ್ಣ.—ಇದರ ಬಗ್ಗೆ ಸಾಕಷ್ಟಾದ ಒಂದು ನೀತಿಯನ್ನು ಅನುಸರಿಸಲು ನಮ್ಮ ರಾಜ್ಯ ಸರಕಾರದವರು ಈಚೆಗೆ ಮಹಾರಾಷ್ಟ್ರದ ಮಾದರಿಯಲ್ಲಿ ಒಂದು ಹೈ ಪವರು ಕಮಿಟಿಯನ್ನು ನೇಮಕ ಮಾಡಬೇಕೆಂದು ಸರಕಾರ ಒಂದು ತೀರ್ಮಾನಕ್ಕೆ ಬಂದಿದೆ. ಯಾವುದೇ ಕಾರ್ಖಾನೆಗೆ ಗರಿಷ್ಟ ಬೆಲೆ ಇರಬೇಕೆಂದು ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕನಿಷ್ಟ ಬೆಲೆಯನ್ನು ಕೇಂದ್ರ ಸರಕಾರದವರು ಸೂಚಿಸುತ್ತಾರೆ, ಇಷ್ಟು ಬೆಲೆಯನ್ನು ರೈತರಿಗೆ ಒದಗಿಸಿ ಕೊಡಬೇಕು ಎನ್ನುವುದು ಎಲ್ಲ ಕಾರ್ಖಾನೆಗಳವರ ಕರ್ತವ್ಯ. ಇದಕ್ಕೆ ಕಡಿವಾಣ ಇಲ್ಲದಂತೆ ನೋಡಿಕೊಳ್ಳುವುದು ಸರಕಾರದ ಕರ್ತವ್ಯ. ಕೆಲವು ಕಾರ್ಖಾನೆಗಳವರು ಕೇಂದ್ರದವರು ಹೇಳಿರುವ ಬೆಲೆಗಿಂತ ಹೆಚ್ಚಿಗೆ ಕೊಡುತ್ತಾರೆ. ಎಷ್ಟು ಕೊಡಬೇಕೆನ್ನುವುದು ಆಯಾ ಕಾರ್ಖಾನೆಯ ಮೇಲೆ ಅವಲಂಬಿಸಿರುತ್ತದೆ.

ಶ್ರೀ ಪಿ. ಪಿ. ಹೆಗ್ಗರೆ.—ಹತ್ತಿಪ್ಪತ್ತು ಎಕರೆಗಳಲ್ಲಿ ಕಬ್ಬು ಬೆಳೆಯುವ ರೈತರಿಗೆ ಶೇಕಡಾ 95 ರಷ್ಟು ಕಬ್ಬನ್ನು ಕೊಟ್ಟರು ಸ್ವಲ್ಪ ಭಾಗದ ಕಬ್ಬು ಬೆಲ್ಲ ಮಾಡಲು ಅವರಿಗೆ ಸಿಗುತ್ತದೆ. ಆದರೆ ಒಂದೆರಡು ಎಕರೆಗಳಲ್ಲಿ ಕಬ್ಬು ಬೆಳೆಯುವ ರೈತರಿಗೆ ಬೆಲ್ಲ ಮಾಡಲು ಅವಕಾಶ ಇಲ್ಲ. ಇಂತಹ ರೈತರಿಗೆ ಬೆಲ್ಲ ಮಾಡಲು ಅವಕಾಶ ಮಾಡಿಸಿ ಕೊಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಇದು ಅಲ್ಲಿಯ ಸನ್ನಿವೇಶಗಳ ಮೇಲೆ ನಿರ್ಧಾರ ಮಾಡಬೇಕಾಗುತ್ತದೆ.

OFFICIALS OF MOTOR VEHICLE DEPARTMENT

244. Sri M. B. RAMASWAMY (Anekal)—

Will the Minister for Transport and Housing be pleased to state :–

(a) the number of class I, II, III and IV Officials working in the Motor Vehicle Department ;

(b) of them, the number of officials belonging to S.C./S.T., (Categorywise information may be furnished) ;

(c) whether up-to-date cadre and recruitment rules has been finalised ;

(d) if not, the basis adopted for granting promotion from lower cadre to upper cadre ;

(e) whether it has come to the notice of the Government that injustice has been done to Motor Vehicle Inspectors in respect of promotion ;

(f) the number of officials and officers of the Motor Vehicle Department are working in Bangalore for past 8 to 10 years ?